REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 46 । 18 ಫೆಬ್ರವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-

## 2026-27ರ ರಾಜ್ಯ ಬಜೆಟ್ ಪೂರ್ವಭಾವಿ ಸಭೆ
## ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ ಅಧಿಕಾರಿಗಳೊಂದಿಗೆ ಸಮಾಲೋಚನೆ



**ಬೆಂಗಳೂರು :** ವಿವಿಧ ಇಲಾಖೆಗಳು ಸೇರಿದಂತೆ ಸಹಕಾರ ಇಲಾಖೆಗೆ ಸಂಬಂಧಿಸಿದ ಅಂಶಗಳ ಕುರಿತು 2026–27ನೇ ಸಾಲಿನ ರಾಜ್ಯ ಬಜೆಟ್ ಪೂರ್ವಭಾವಿ ಸಭೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಗರದ ರೇಸ್‌ಕೋರ್ಸ್ ರಸ್ತೆಯ 'ಶಕ್ತಿಭವನ' ಸಭಾಂಗಣದಲ್ಲಿ ನಡೆಯಿತು.

ಸಹಕಾರ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಇಲಾಖೆಗಳ ಸಚಿವರು, ಹಾಗೂ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಇಲಾಖೆಗೆ ಸಂಬಂಧಿಸಿದ ಪ್ರಮುಖ ಯೋಜನೆಗಳು ಹಾಗೂ ವಿಷಯಗಳ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ, ಅಪರ ಕಾರ್ಯದರ್ಶಿಗಳಾದ ಎಸ್. ಜಿಯಾವುಲ್ಲಾ, ಸಹಕಾರ ಇಲಾಖೆ ಕಾರ್ಯದರ್ಶಿ ಸಂಜಯ ಬಿ. ಶೆಟ್ಟಣ್ಣನವರ, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬ್ಯಾಂಕುಗಳು ಕನಿಷ್ಠ ಮೊತ್ತಕ್ಕೆ ದಂಡ ವಿಧಿಸದಂತೆ ಲೋಕಸಭಾ ಸಮಿತಿ ಶಿಫಾರಸು

**ನವದೆಹಲಿ :** ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದು ಕೊಳ್ಳದ ಕಾರಣಕ್ಕಾಗಿ ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ವಲಯದ ಬ್ಯಾಂಕ್‌ಗಳು 2024–25ನೇ ಸಾಲಿನಲ್ಲಿ ರೂ.4,817.96 ಕೋಟಿ ದಂಡ ವಿಧಿಸಿವೆ. ಬ್ಯಾಂಕ್‌ಗಳು ದಂಡ ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಈ ಸಂಬಂಧ ಆರ್‌ಬಿಐ ಹಾಗೂ ಹಣಕಾಸು ಸೇವಾ ಇಲಾಖೆಯು ಅಗತ್ಯ ಮಾರ್ಗಸೂಚಿ ಹೊರಡಿಸಬೇಕು ಎಂದು ಲೋಕಸಭೆಯ ಅರ್ಜಿಗಳ ಸಮಿತಿ ಶಿಫಾರಸು ಮಾಡಿದೆ. ಬ್ಯಾಂಕುಗಳು ಗ್ರಾಹಕರಿಗೆ ದಂಡ ವಿಧಿಸುವ ಬದಲು ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವ ಮೂಲಕ ಕನಿಷ್ಠ ಮೊತ್ತ ಕಾಯ್ದುಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಜತೆಗೆ, ಸ್ಥಿರ ಠೇವಣಿ ನಿರ್ವಹಣೆ ಮಾಡುವವರಿಗೆ ಹೆಚ್ಚಿನ ಬಡ್ಡಿದರ ನೀಡಬಹುದು' ಎಂದು ಸಂಸದ ಚಂದ್ರಪ್ರಕಾಶ್ ಜೋಶಿ ನೇತೃತ್ವದ 15 ಸದಸ್ಯರ ಸಮಿತಿ ಸಲಹೆ ನೀಡಿದೆ. 'ಸರ್ಕಾರಿ ಸ್ವಾಮ್ಯದ ಬಹುತೇಕ ಬ್ಯಾಂಕುಗಳು ಈ ದಂಡವನ್ನು ಕೈಬಿಡಲು ನಿರ್ಧರಿಸಿದ್ದರೂ, ಆರ್‌ಬಿಐ ಈ ಬಗ್ಗೆ ಯಾವುದೇ ನಿರ್ದೇಶನ ಅಥವಾ ಮಾರ್ಗಸೂಚಿ ಹೊರಡಿಸಿಲ್ಲ. ಖಾಸಗಿ ವಲಯದ ಬ್ಯಾಂಕುಗಳು ಇನ್ನೂ ದಂಡ ವಿಧಿಸುತ್ತಿವೆ. ಹೀಗಾಗಿ, ಎಲ್ಲ ಬ್ಯಾಂಕ್‌ಗಳು ಏಕರೂಪದ ನೀತಿಯನ್ನು ಅಳವಡಿಸಿಕೊಳ್ಳಬೇಕು. ಸಹಕಾರ ಬ್ಯಾಂಕ್ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಎಲ್ಲ ಬ್ಯಾಂಕುಗಳಿಗೆ ಅಗತ್ಯ ಮಾರ್ಗಸೂಚಿ ರೂಪಿಸಬೇಕು' ಎಂದು ಹೇಳಿದೆ.

## ದಿನಾಂಕ : 27.02.2026ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರು ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಂಪಿಯಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583276, ತಾಲ್ಲೂಕು ಹೊಸಪೇಟೆ, ಜಿಲ್ಲೆ ವಿಜಯನಗರ ಇಲ್ಲಿ ದಿನಾಂಕ:27.02.2026ರಂದು ಏರ್ಪಡಿಸಲಾಗಿದೆ. ಸದರಿ ವಿಚಾರ ಸಂಕಿರಣದಲ್ಲಿ Good Governance & Professionalism in UCBs Sector, Women Empowerment through Urban Co-operative Banks (UCBs), RBI's Regulatory Concerns for UCBs, Important Provisions of KCS Act & Rules ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ:27.02.2026ರಂದು ಬೆಳಿಗ್ಗೆ 8.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ:21.02.2026ರ ಸಾಯಂಕಾಲ 5.00 ಗಂಟೆ ಒಳಗಾಗಿ ಮಹಾಮಂಡಳದ ಇ–ಮೇಲ್ ವಿಳಾಸ: kscubfed@gmail.comಕ್ಕೆ ಭಾಗವಹಿಸುವವರ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ತಾವುಗಳು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಪರವಾಗಿ ಕೋರಲಾಗಿದೆ.

ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಹೆಚ್ಚಳ: ಭಾರತೀಯ ರಿಸರ್ವ್ ಬ್ಯಾಂಕ್ 2
ಬಾಗಲಕೋಟೆಯ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ವಿಜಯಪುರ ಶಾಖೆಯ ಸ್ಥಳಾಂತರದ ಉದ್ಘಾಟನಾ ಸಮಾರಂಭ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ಬ್ಯಾಂಕುಗಳು ಬಡ ಖಾತೆದಾರರಿಂದ ದಂಡ ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಲಿ

ಕನಿಷ್ಠ ಬಾಕಿ ಹೊಂದಿರದ ಖಾತೆದಾರರ ಮೇಲೆ ದಂಡ ವಿಧಿಸುತ್ತಿರುವ ಬ್ಯಾಂಕುಗಳು ಕಳೆದ ಮೂರು ವರ್ಷಗಳಲ್ಲಿ ಈ ರೀತಿಯಾಗಿ ರೂ. 8,000 ಕೋಟಿಗಳಿಗೂ ಹೆಚ್ಚು ದಂಡವನ್ನು ಸಂಗ್ರಹಿಸಿವೆ. ಇದು ಲೋಕಸಭೆಯಲ್ಲಿ ಕೇಂದ್ರ ಹಣಕಾಸು ರಾಜ್ಯ ಸಚಿವರು ಪ್ರಶ್ನೆಯೊಂದಕ್ಕೆ ನೀಡಿರುವ ಮಾಹಿತಿ. ಇಷ್ಟು ಮಾತ್ರವಲ್ಲದೆ, ಗ್ರಾಹಕರ ಮೊಬೈಲ್‌ಗಳಿಗೆ ಕಳಿಸುವ ಎಸ್‌ಎಂಎಸ್ ಸೇವೆಗಳಿಗಾಗಿಯೂ ರೂ. 3,388 ಕೋಟಿ ಹಣ ವಸೂಲಿ ಮಾಡಿವೆ ಎನ್ನುವ ಅದೆ ಉತ್ತರದಲ್ಲಿದೆ.

ಇದು ಸಾರ್ವಜನಿಕ ಬ್ಯಾಂಕುಗಳು ಸಂಗ್ರಹಿಸಿರುವ ಮೊತ್ತವಾದರೆ, ಇತರ ಖಾಸಗಿ ಬ್ಯಾಂಕುಗಳು ಇದಕ್ಕಿಂತಲೂ ಹಲವು ಸಾವಿರ ಕೋಟಿಗಳಷ್ಟು ಹೆಚ್ಚಿನ ಮೊತ್ತ ಸಂಗ್ರಹಿಸಿವೆ. ಇಲ್ಲಿ ಗಮನಿಸಬೇಕಾದ್ದು, ಬ್ಯಾಂಕುಗಳು ಈ ರೀತಿಯಾಗಿ ದಂಡ ಸಂಗ್ರಹಿಸಿರುವುದು ಬಡ ಗ್ರಾಹಕರ ಹಣವಾಗಿದೆ. ಜನಸಾಮಾನ್ಯ ತಮ್ಮ ದೈನಂದಿನ ಅವಶ್ಯಕತೆಗಳಿಗಾಗಿ ತಮ್ಮ ಖಾತೆಗಳಿಂದ ಹಣವನ್ನು ಹಿಂಪಡೆಯುವುದು ಸಹಜ. ಅವರುಗಳ ಖಾತೆಗಳಲ್ಲಿ ಹಣ ಕಡಿಮೆಯಾದ ಕಾರಣಕ್ಕೆ ದಂಡ ವಿಧಿಸುವುದು ಬಡ ಮತ್ತು ಮಧ್ಯಮ ವರ್ಗದವರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಇಂದಿನ ದುಬಾರಿ ದಿನಮಾನದಲ್ಲಿ ಎಲ್ಲಾ ಅಗತ್ಯವಸ್ತುಗಳ ಬೆಲೆಯೂ ವಿಪರೀತ ಏರಿರುವಾಗ ತಮ್ಮ ಅಗತ್ಯಗಳಿಗೆ ಯಾರಲ್ಲಿ ಕೇಳುವುದು. ಎಲ್ಲರೂ ಬರಿಗೈ ದಾಸರೆ. ವಿಧಿ ಇಲ್ಲದ ಬಡ ಗ್ರಾಹಕರು ತಮ್ಮ ಖಾತೆಗಳಲ್ಲಿ ಇರುವ ಅಲ್ಪ ಹಣವನ್ನೇ ಹಿಂಪಡೆಯುತ್ತಾರೆ. ಅವರ ದುಡಿಮೆಯ ಹಣವನ್ನು ಬ್ಯಾಂಕುಗಳು ದೋಚುವುದು ಯಾವ ನ್ಯಾಯ?

ಗ್ರಾಹಕರಿಗೆ ಉತ್ತಮ ಸೇವೆ ನೀಡಲು ದಂಡ ವಿಧಿಸಬೇಕಾಗುತ್ತದೆ ಎಂದು ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತವೆ. ಬ್ಯಾಂಕುಗಳು ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕಾದ್ದು ಅವುಗಳ ಧರ್ಮ. ಗ್ರಾಹಕರಿಗಾಗಿಯೇ ಬ್ಯಾಂಕುಗಳು ಹಾಗೂ ಗ್ರಾಹಕರಿದ್ದರೇ ಬ್ಯಾಂಕುಗಳು ಎನ್ನುವುದನ್ನು ಅರಿತುಕೊಳ್ಳಬೇಕಿದೆ. ಒಂದೆಡೆ ಸಿರಿವಂತರಿಗೆ, ಕೈಗಾರಿಕೋದ್ಯಮಿಗಳಿಗೆ, ಬೃಹತ್ ಉದ್ದಿಮೆದಾರಿಗೆ ಕೋಟ್ಯಾಂತರ ರೂಪಾಯಿಗಳು ಸಾಲ ಕೊಡುವ ಬ್ಯಾಂಕುಗಳು ಸಾಲ ವಸೂಲಾಗದೆ ಉಳಿದಾಗ ಅವುಗಳನ್ನು ಮನ್ನಾ ಮಾಡುತ್ತವೆ. ಇನ್ನೊಂದೆಡೆ ಬಡ ಗ್ರಾಹಕರ ಬೆವರ ಹಣವನ್ನು ಈ ರೀತಿಯಾಗಿ ವಸೂಲಿ ಮಾಡುತ್ತವೆ. ಇದು ಯಾವುದೇ ರೀತಿಯಲ್ಲೂ ಸಮರ್ಥನಿಯವಲ್ಲ ಎಂದೆ ಹೇಳಬೇಕಾಗುತ್ತದೆ. ಒಂದು ವೇಳೆ ಗ್ರಾಹಕ ತನ್ನ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಂಡರೂ ಸಿಗುವುದು ಅಲ್ಪ ಬಡ್ಡಿ ದರ ಮಾತ್ರ. ಆದರೆ, ಕನಿಷ್ಠ ಮೊತ್ತ ಕಾಯ್ದುಕೊಳ್ಳಲು ವಿಫಲವಾದರೆ ಬ್ಯಾಂಕ್ ವಿಧಿಸುವ ದಂಡವು ಬಡ್ಡಿಗಿಂತ ಶೇ.15 ರಿಂದ 20ಪಟ್ಟು ಹೆಚ್ಚಾಗಿರುತ್ತದೆ. ಬಡ್ಡಿ ಮತ್ತು ದಂಡದ ನಡುವಿನ ಈ ಭಾರಿ ವ್ಯತ್ಯಾಸವು ನ್ಯಾಯಸಮ್ಮತವಲ್ಲ.

ಬ್ಯಾಂಕುಗಳು ಹೀಗೆ ದಂಡ ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಲೋಕಸಭಾ ಸಮಿತಿಯೊಂದು ಶಿಫಾರಸು ಮಾಡಿರುವುದಾಗಿ ವರದಿಯಾಗಿದೆ. ಇದು ಒಂದು ಸ್ವಾಗತಾರ್ಹ ಬೆಳವಣಿಗೆ. ಕೂಡಲೇ ಈ ಶಿಫಾರಸು ಜಾರಿಯಾಗಲಿ. ಆರ್‌ಬಿಐ ಈ ಕುರಿತಂತೆ ಮಾರ್ಗಸೂಚಿ ಹೊರಡಿಸಲಿ ಆದಷ್ಟು ಬೇಗ ಈ ರೀತಿಯಾದ ಹಗಲು ದರೋಡೆಯನ್ನು ನಿಲ್ಲಿಸಲಿ ಎಂದು ಆಶಿಸುತ್ತೇನೆ.

▶▶ ಎಚ್.ಕೆ. ಪಾಟೀಲ

## ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಹೆಚ್ಚಳ: ಭಾರತೀಯ ರಿಸರ್ವ್ ಬ್ಯಾಂಕ್

**ಮುಂಬೈ:** ಪ್ರಸಕ್ತ ವರ್ಷದ ಜನವರಿ 31ರ ವೇಳೆಗೆ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣವು ಶೇ 14.41ಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಜಿಎಸ್‌ಟಿ ದರ ಸರಳೀಕರಣದ ಬಳಿಕ ಬ್ಯಾಂಕ್‌ಗಳ ಸಾಲದ ಬೆಳವಣಿಗೆ ದರ ವಿಸ್ತರಣೆ ಆಗಿದೆ. ರಿಟೇಲ್ ಮತ್ತು ಕಾರ್ಪೊರೇಟ್ ಕಂಪನಿಗಳ ಸಾಲ ತೆಗೆದುಕೊಳ್ಳುವಿಕೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಜುಲೈ ತಿಂಗಳಿನಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಶೇ.9.98ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ.10 ದಾಟಿತ್ತು. ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ಮಂಡಳಿಯು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದು ವ್ಯಾಪಾರಕ್ಕೆ ಉತ್ತೇಜನ ನೀಡಿದ್ದು, ಸಾಲದ ನೀಡಿಕೆಯು ಶೇ.10.29ಕ್ಕೆ ತಲುಪಿತು.

ಹಬ್ಬದ ಬೇಡಿಕೆ, ರಿಟೇಲ್ ಸಾಲದ ಹೆಚ್ಚಳ ಮತ್ತು ವ್ಯಾಪಾರಕ್ಕೆ ನೀಡುವ ಸಾಲದಲ್ಲಿನ ಏರಿಕೆಯಿಂದ ಅಕ್ಟೋಬರ್ ಮತ್ತು ನವೆಂಬರ್‌ಲ್ಲಿ ಇದು ಶೇ.11.4ಕ್ಕೆ ಏರಿಕೆ ಆಯಿತು. ಇದೇ ಪ್ರವೃತ್ತಿ ಡಿಸೆಂಬರ್‌ನಲ್ಲೂ ಮುಂದುವರಿಯಿತು. ಡಿಸೆಂಬರ್ 31ರ ವೇಳೆಗೆ ಸಾಲದ ಬೆಳವಣಿಗೆ ದರ ಶೇ.14.39ಕ್ಕೆ ತಲುಪಿತು. ಜನವರಿ ಅಂತ್ಯದ ವೇಳೆಗೆ ಶೇ.14.41ಕ್ಕೆ ತಲುಪಿತು ಎಂದು ತಿಳಿಸಿದೆ.

## ವಿದೇಶಿ ವಿನಿಮಯ ಸಂಗ್ರಹ ಇಳಿಕೆ : ಆರ್‌ಬಿಐ

**ಮುಂಬೈ :** ಫೆಬ್ರುವರಿ 6ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ರೂ. 60 ಸಾವಿರ ಕೋಟಿಯಷ್ಟು ಇಳಿಕೆ ಆಗಿದೆ.

ಒಟ್ಟು ಮೀಸಲು ಸಂಗ್ರಹವು ರೂ. 64.93 ಲಕ್ಷ ಕೋಟಿಗೆ ಇಳಿದಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ತಿಳಿಸಿದೆ.

ಜನವರಿ 30ಕ್ಕೆ ಕೊನೆಗೊಂಡ ವಾರದಲ್ಲಿ ಇದು ರೂ. 65.54 ಲಕ್ಷ ಕೋಟಿಯಷ್ಟಾಗಿತ್ತು. ಇದು ಇದುವರೆಗಿನ ಗರಿಷ್ಠ ಮಟ್ಟವಾಗಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ರೂ. 69,374 ಕೋಟಿಯಷ್ಟು ಹೆಚ್ಚಳವಾಗಿದ್ದು, ರೂ. 51.62 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ರೂ. 1.28 ಲಕ್ಷ ಕೋಟಿ ಇಳಿಕೆಯಾಗಿದ್ದು, ರೂ. 11.18 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ರೂ. 1.70 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ರೂ. 42.696 ಕೋಟಿಯಾಗಿದೆ ಎಂದು ತಿಳಿಸಿದೆ.

# ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನೂತನ ಆಡಳಿತ ಮಂಡಳಿಯ ಪ್ರಧಾನ ಕಛೇರಿ ಉದ್ಘಾಟನಾ ಸಮಾರಂಭ




**ದಾವಣಗೆರೆ:** ದಿನಾಂಕ: 04.02.2026ರಂದು ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನೂತನ ಆಡಳಿತ ಮಂಡಳಿಯ ಪ್ರಧಾನ ಕಛೇರಿ ಕಟ್ಟಡದ ಉದ್ಘಾಟನೆಯನ್ನು ಶ್ರೀ ಷ||ಬ್ರ|| ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಯಶವಂತರಾವ್, ಶ್ರೀ ಸಮರ್ಥ್ ಶಾಮನೂರು ಮತ್ತು ವಿಶೇಷ ಆಹ್ವಾನಿತರಾದ ಶ್ರೀ ದಿನೇಶ್ ಕೆ. ಶೆಟ್ಟಿ, ಶ್ರೀ ಸಿರಿಗೆರೆ ರಾಜಣ್ಣ, ಶ್ರೀ ಕೋಗುಂಡಿ ಬಕ್ಕೇಶಪ್ಪ ಇವರು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾದ ಶ್ರೀ ರಾಘವೇಂದ್ರ ಎ.ಸಿ. ಇವರು ಮಾತನಾಡಿ ಬ್ಯಾಂಕು 1996ರಂದು ಆರಂಭಗೊಂಡು ಯಶಸ್ವಿಯಾಗಿ 30 ವರ್ಷಗಳಿಂದ “ಎ” ಗ್ರೇಡ್ ಹೊಂದಿ ಯಶಸ್ವಿ ಪಥದತ್ತ ಸಾಗಿರುವುದು ಹೆಮ್ಮೆಯ ವಿಷಯ. ಸುಮಾರು 10 ಜನ ಅಧ್ಯಕ್ಷರು ಹಾಗೂ ಸುಮಾರು ಜನ ನಿರ್ದೇಶಕರು ಅಧಿಕಾರ ವಹಿಸಿ ಬ್ಯಾಂಕಿನ ಏಳಿಗೆಗಾಗಿ ತಮ್ಮ ಸೇವೆಯನ್ನು ನೀಡಿದ್ದಾರೆ. ಬ್ಯಾಂಕಿನ ಇತಿಹಾಸದಲ್ಲಿ ಈ ದಿನ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾಗಿರುವ ಹೆಮ್ಮೆಯ ದಿನವಾಗಿದೆ. ಐದು ಸಮಾಜದ ಹಿರಿಯರು ಹಾಕಿಕೊಟ್ಟ ಬುನಾದಿಯಲ್ಲಿ ಮುನ್ನಡೆದು, ಬ್ಯಾಂಕಿನ ಸ್ವಂತ ಕಟ್ಟಡದ ಕನಸು ಇಂದು ನನಸಾಗಿದೆ ಎಂದರು.



ಸಭೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಯಶವಂತರಾವ್ ಜಾಧವ್, ಶ್ರೀ ಮಾಲತೇಶ್ ರಾವ್ ಡಿ. ಜಾಧವ್, ಶ್ರೀ ವಿಠ್ಠಲ್ ಎಮ್.ಎಸ್, ಶ್ರೀ ಸುರೇಂದ್ರ ಕುಮಾರ್ ಆರ್.ವಾಂಜ್ರೆ ಹಾಗೂ ವಿಶೇಷ ಆಹ್ವಾನಿತರಾದ ಶ್ರೀ ದಿನೇಶ್ ಕೆ.ಶೆಟ್ಟಿ, ಶ್ರೀ ಸಿರಿಗೆರೆ ರಾಜಣ್ಣ, ಶ್ರೀ ಕೋಗುಂಡಿ ಬಕ್ಕೇಶಪ್ಪ, ಶ್ರೀ ಎನ್.ಎ. ಮುರುಗೇಶ್, ಶ್ರೀ ಬ.ಸಿ.ಉಮಾಪತಿ, ಶ್ರೀ ಜಯಕುಮಾರ್ ಎಂ, ಶ್ರೀ ಪರಶುರಾಮ್ ಅಂಬೇಕರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗೋಪಾಲ್‌ರಾವ್ ಮಾನೆ ವಹಿಸಿದ್ದರು.ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಗಿರಿಧರ್ ಮೆಹರ್‌ವಾಡೆ, ನಿರ್ದೇಶಕರುಗಳಾದ ಶ್ರೀ ಬಾಬುರಾವ್ ಸಾಳಂಕಿ ಎಸ್, ಶ್ರೀ ಸತ್ಯನಾರಾಯಣ ಆರ್.ಜಿ, ಶ್ರೀ ಆನಂದ ಡಿ. ಸಫಾರೆ, ಶ್ರೀ ಗಣೇಶ್ ಪಿ. ಕ್ಷೀರಸಾಗರ, ಶ್ರೀ ಮಧುಕರ ಎಸ್.ಕೆ, ಶ್ರೀ ಮನೋಹರ್ ವಿ, ಶ್ರೀ ವಿಠ್ಠಲ್ ಆರ್, ಶ್ರೀ ರಾಜು ಎಲ್. ಬದ್ದಿ, ಶ್ರೀಮತಿ ಅನಿತಾಬಾಯಿ ಮಾಲತೇಶ್‌ರಾವ್, ಶ್ರೀಮತಿ ಡಾ|| ರಜನಿ ಎಸ್, ಶ್ರೀಮತಿ ರೇಣುಕಾಬಾಯಿ, ಶ್ರೀ ಯಲ್ಲಪ್ಪ ಜಿ, ಶ್ರೀ ಬಾಬು, ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ನಾಗರಾಜ್ ಗೌಡನಕಟ್ಟಿ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಸಭೆಯಲ್ಲಿ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಗಿರಿಧರ್ ಮೆಹರವಾಡೆ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಗಣ್ಯರನ್ನು ಸ್ವಾಗತಿಸಿದರು. ಶ್ರೀ ರಾಜು ಎಲ್. ಬದ್ದಿ ರವರು ವಂದನಾರ್ಪಣೆ ಸಲ್ಲಿಸಿದರು.

# ಬಾಗಲಕೋಟೆಯ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ವಿಜಯಪುರ ಶಾಖೆಯ ಸ್ಥಳಾಂತರದ ಉದ್ಘಾಟನಾ ಸಮಾರಂಭ




**ವಿಜಯಪುರ:** ಶತಮಾನಗಳ ಇತಿಹಾಸ ಹೊಂದಿರುವ ಬಾಗಲಕೋಟೆಯ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ವಿಜಯಪುರ ಶಾಖೆಯ ಸ್ಥಳಾಂತರ ಕಟ್ಟಡದ ಉದ್ಘಾಟನಾ ಸಮಾರಂಭ 9–02–2026 ರಂದು ಬೆಳಿಗ್ಗೆ 9–30ಕ್ಕೆ ಜರುಗಿತು. ಇನ್ನುಮುಂದೆ ಶ್ರೀ ಸಿದ್ದೇಶ್ವರ ದೇವಸ್ಥಾನದ ಎದುರಿನ ರಸ್ತೆ, ಎಸ್.ಎಸ್.ಪ್ರಂಟ್ ರೋಡ, ಸಿದ್ದನಗೌಡ ಈ. ಪಾಟೀಲ ಇವರ ಕಟ್ಟಡದಲ್ಲಿ ವಿಜಯಪುರ ಶಾಖೆ ಕಾರ್ಯಾರಂಭ ಮಾಡಲಿದೆ.

ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಎ.ಟಿ.ಎಂ, ಆರ್.ಟಿ.ಜಿ.ಎಸ್ ಸೌಲಭ್ಯ, ಬಂಗಾರ ಆಭರಣ ಸಾಲ, ಸೇಫ್ ಡಿಪಾಜಿಟ್ ಲಾಕರ್ ಸೌಲಭ್ಯಗಳೊಂದಿಗೆ ಲೋಕಾರ್ಪಣೆಗೊಂಡಿತು. ಶ್ರೀ ಷ. ಬ್ರ. ಅಭಿನವ ಮುರುಗೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಇಂಡಿ, ಇವರು ದಿವ್ಯ ಸಾನಿಧ್ಯ ವಹಿಸಿದ್ದರು ಉದ್ಘಾಟಕರಾಗಿ ಶ್ರೀ ರಮೇಶ ಸಿ.ಜಿಗಜಿಣಗಿ, ಸಂಸದರು, ಡಾ. ಎಂ.ಬಿ.ಪಾಟೀಲ ಜಿಲ್ಲಾ ಉಸ್ತುವಾರಿ ಸಚಿವರು, ಜವಳಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಶಿವಾನಂದ ಎಸ್. ಪಾಟೀಲ, ಬಸನಗೌಡ ಆರ್. ಪಾಟೀಲ (ಯತ್ನಾಳ) ವಿಜಯಪುರ ಶಾಸಕರು ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಸುನೀಲಗೌಡ ಬಿ.ಪಾಟೀಲ.ಎಂ.ಎಲ್.ಸಿ, ಅಪ್ಪು ಪಟ್ಟಣಶೆಟ್ಟಿ ಮಾಜಿ ಸಚಿವರು, ಗುಡ್ಡಾಪೂರ ದಾನಮ್ಮದೇವಿ ಟ್ರಸ್ಟ ಅಧ್ಯಕ್ಷರು ವಿಜುಗೌಡ ಎಸ್. ಪಾಟೀಲ ಆಗಮಿಸಿದ್ದರು. ಬ್ಯಾಂಕಿನ ಅಧ್ಯಕ್ಷರಾದ ಪ್ರಕಾಶ ಈ. ತಪಶೆಟ್ಟಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಬ್ಯಾಂಕಿನ ಉಪಾಧ್ಯಕ್ಷ ರವಿಕುಮಾರ ಪಟ್ಟಣದ ಉಪಸ್ಥಿತರಿದ್ದರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು, ವ್ಯವಸ್ಥಾಪನಾ ಮಂಡಳಿ ಸದಸ್ಯರು, ವಿಜಯಪುರ ಶಾಖೆಯ ಸಲಹಾ ಸಮಿತಿ ಸದಸ್ಯರು, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ಸಿ.ಕೇಮಾಳಿ, ಶಾಖಾ ವ್ಯವಸ್ಥಾಪಕರು ರಮೇಶ ಅಂಗಡಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು :** ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಬಿ. ಶಿವಣ್ಣ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.



# ಹೊನ್ನಾವರ ಅರ್ಬನ್ ಬ್ಯಾಂಕಿನಿಂದ ಪ್ರತಿಭಾ ಪುರಸ್ಕಾರ



**ಹೊನ್ನಾವರ :** ಹೊನ್ನಾವರ ಅರ್ಬನ್ ಬ್ಯಾಂಕಿನ 2024–2025ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ದಿನಾಂಕ : 08–02–2026 ರಂದು ಬ್ಯಾಂಕಿನ ಮೇಲ್ಮಹಡಿಯಲ್ಲಿನ ಎಂ.ಎ. ಕಿಣಿ ಮತ್ತು ಎಲ್.ಕೆ. ಶ್ಯಾನಭಾಗ ಶ್ರೋಫ್ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮದ ಅತಿಥಿಗಳಾಗಿ ಡಾ॥ ಡಿ.ಎಲ್. ಹೆಬ್ಬಾರ, ಪ್ಲೇಸ್‌ಮೆಂಟ್ ಆಫೀಸರ್ ಎಂಡ್ ಪಬ್ಲಿಕ್ ರಿಲೇಶನ್ ಆಫೀಸರ್ ಡಾ.ಎಮ್. ಪಿ. ಕರ್ಕಿ ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ ಎಂಡ್ ರಿಸರ್ಚ, ಎಸ್. ಡಿ. ಎಮ್ ಕಾಲೇಜ, ಹೊನ್ನಾವರ ಇವರು ಆಗಮಿಸಿದ್ದರು.

ಅತಿಥಿಗಳು ಬ್ಯಾಂಕಿನ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸಾಧಕರು ಸಮಾಜಕ್ಕೆ ಭರವಸೆಯಾಗಿರುತ್ತಾರೆ. ಅವರು ಸಮಾಜಕ್ಕೆ ಹಾಗೂ ಇತರರಿಗೆ ದಾರಿದೀಪವಾಗಬೇಕು, ವಿದ್ಯಾರ್ಥಿಗಳನ್ನುದ್ದೇಶಿಸಿ "ವ್ಯಕ್ತಿ ಶ್ರೇಷ್ಠನೆನಿಸಿಕೊಳ್ಳುವುದು ಜನ್ಮದಿಂದಲ್ಲ, ಮಾಡುವ ಕೆಲಸದಿಂದ" ಎಂದು ಚಾಣಕ್ಯನ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಭೂತ, ಭವಿಷ್ಯದ ಬಗ್ಗೆ ಚಿಂತೆ ಬೇಡ, ವರ್ತಮಾನ ಬಳಸಿಕೊಳ್ಳಿ, ಸಿಕ್ಕ ಅವಕಾಶವನ್ನು ವ್ಯರ್ಥಗೊಳಿಸಬೇಡಿ ಎಂದರು, ಸೇವಾ ಭಾವನೆ ಮತ್ತು ತ್ಯಾಗ ಮನೋಭಾವನೆಯನ್ನು ಹೊಂದಬೇಕು. ಕನಸು ಕಾಣಿರಿ, ಹಗಲುಗನಸಾದರು ದೊಡ್ಡದಾಗಿ ಕಾಣಿರಿ ಹಾಗೂ ಸಾಧಿಸುತ್ತಾ ಶ್ರಮ ಪಡಿ, ಯುವ ಮನಸ್ಸು ಹೊಸ ವಿಷಯಗಳನ್ನು ಬೇಗನೆ ಅರಿತು ಕೊಳ್ಳುತ್ತದೆ ಆದರೆ ಮಾನವೀಯತೆಯನ್ನು ಎಂದಿಗೂ ಮರೆಯಬೇಡಿ ಎಂದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡ ಹೊನ್ನಾವರ ಅರ್ಬನ್ ಬ್ಯಾಂಕನ್ನು ಶ್ಲಾಘಿಸಿದರು.

ಅಭಿನಂದನಾ ಭಾಷಣ ಮಾಡಿದ ಶ್ರೀ ಚಂದ್ರಪ್ಪ ಅಣ್ಣಪ್ಪನವರರವರು ಮಾತನಾಡಿ ಒಂದು ಹಣಕಾಸಿನ ಸಂಸ್ಥೆಯಾದ ಹೊನ್ನಾವರ ಅರ್ಬನ್ ಬ್ಯಾಂಕಿನವರು ಪ್ರತಿಭಾವಂತರನ್ನು ಗುರುತಿಸಿ ಪುರಸ್ಕರಿಸಿದ್ದಾರೆ, ಸಾಮಾಜಿಕ ಉಪಯೋಗಕ್ಕಾಗಿ ಕೆಲಸ ಮಾಡುತ್ತಿದೆ. ಲಾಭ ಗಳಿಸುವುದೊಂದೇ ಉದ್ದೇಶ ಆಗಿರದೇ ಗ್ರಾಹಕ ಸ್ನೇಹಿ ಕೆಲಸ ಮಾಡುತ್ತಿದೆ. ಇದು ಇತರ ಬ್ಯಾಂಕುಗಳಿಗೆ ಮಾದರಿಯಾಗಿದೆ ಎಂತ ಹೇಳಿ ಬ್ಯಾಂಕಿನ ಕೆಲಸವನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 45 ಪ್ರತಿಭಾವಂತರಿಗೆ ಹಾಗೂ ಪ್ರತಿಭಾನ್ವಿತರಿಗೆ ಬ್ಯಾಂಕಿನ ವತಿಯಿಂದ ನಗದು ಪುರಸ್ಕಾರ ಹಾಗೂ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಅರ್ಬನ್ ಬ್ಯಾಂಕ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಅರ್ಬನ್ ಬ್ಯಾಂಕ್ 106 ವರ್ಷ ಪೂರೈಸಿದ ಸಹಕಾರಿ ಆಗಿದ್ದು, ಆರ್ಥಿಕ ಸೇವೆಯೊಂದಿಗೆ ಸಾಮಾಜಿಕ ಕಳಕಳಿ ಹೊಂದಿದೆ.

ವಿದ್ಯಾರ್ಥಿಗಳು ತಂದೆ–ತಾಯಿ, ಶಾಲೆ, ಗುರು, ಪ್ರೋತ್ಸಾಹ ನೀಡಿರುವ ಸಂಘ–ಸಂಸ್ಥೆಗಳನ್ನು ಮರೆಯಬಾರದು ಅಲ್ಲದೇ ಕ್ರೀಡಾ ಮನೋಭಾವ, ಕ್ರೀಡಾ ಸ್ಫೂರ್ತಿ ಇಟ್ಟುಕೊಳ್ಳಬೇಕು. ಕುವೆಂಪು ಅವರ ನುಡಿಯಂತೆ "ವಿದ್ಯಾರ್ಥಿಗಳು ಭತ್ತ ತುಂಬುವ ಚೀಲಗಳಾಗಬಾರದು, ಭತ್ತ ಬೆಳೆಯುವ ಗದ್ದೆಗಳಾಗಬೇಕು" ಎಂದು ಕವಿ ಮಾತು ಹೇಳಿದರು.

ಪುರಸ್ಕೃತ ವಿದ್ಯಾರ್ಥಿಗಳಾದ ಅನನ್ಯ ಎಸ್. ಶೇಟ್ ಹಾಗೂ ರೋಷನ್ ಸುಬ್ರಹ್ಮಣ್ಯ ಹೆಗಡೆ ಇವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಬ್ಯಾಂಕಿನ ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಮಚಂದ್ರ ಭಾಗ್ವತ ವಂದಿಸಿದರು. ಶ್ರೀ ಧನಂಜಯ ಪೈ ಹಾಗೂ ಕುಮಾರಿ ಮೇಘನಾ ಗಾಯತೊಂಡೆ ಕಾರ್ಯಕ್ರಮ ನಿರೂಪಿಸಿದರು. ಆರಂಭದಲ್ಲಿ ಎಸ್. ಡಿ. ಎಮ್. ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಶ್ರೀಲತಾ ಗುರುರಾಜ ಇವರ ಸಂಗೀತ ಕಾರ್ಯಕ್ರಮ ನಡೆಯಿತು.

# ಆದಾಯ ತೆರಿಗೆ ಕಾಯ್ದೆ ಕರಡು ಪ್ರಸ್ತಾಪ ಪ್ಯಾನ್‌ಗೆ ಹೊಸ ನಿಯಮ

**ನವದೆಹಲಿ:** ಬ್ಯಾಂಕುಗಳಲ್ಲಿ ನಗದು ಠೇವಣಿ ಇಡುವುದು, ವಿತ್ ಡ್ರಾ ಮಾಡುವುದು, ಮೋಟಾರು ವಾಹನಗಳ ಖರೀದಿ, ಹೋಟೆಲ್ ಬಿಲ್ ಪಾವತಿಯಂತಹ ವಹಿವಾಟುಗಳಿಗೆ ಪ್ಯಾನ್ ಸಂಖ್ಯೆಯನ್ನು ನಮೂದಿಸುವ ಮಿತಿಯನ್ನು ಗಣನೀಯವಾಗಿ ಹೆಚ್ಚಿಸಲು ಹೊಸ ಕರಡು ಆದಾಯ ತೆರಿಗೆ ನಿಯಮಗಳಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸ್ತಾವಿತ ಆದಾಯ ತೆರಿಗೆ ನಿಯಮಗಳು 2026ರ ಪ್ರಕಾರ, ಒಬ್ಬ ವ್ಯಕ್ತಿ ಒಂದು ಹಣಕಾಸು ವರ್ಷದಲ್ಲಿ ತನ್ನ ಒಂದು ಅಥವಾ ಹೆಚ್ಚಿನ ಖಾತೆಗಳಲ್ಲಿ ಒಟ್ಟು 10 ಲಕ್ಷ ರೂ.ಅಥವಾ ಅದಕ್ಕಿಂತ ಹೆಚ್ಚಿನ ನಗದು ಠೇವಣಿ ಅಥವಾ ಹಿಂಪಡೆಯುವಿಕೆ ಮಾಡಿದರೆ ಮಾತ್ರ ಪ್ಯಾನ್ ಸಂಖ್ಯೆ ನಮೂದಿಸುವುದು ಕಡ್ಡಾಯವಾಗಲಿದೆ. ಪ್ರಸ್ತುತ, ಬ್ಯಾಂಕ್‌ಗಳಲ್ಲಿ ಒಂದೇ ದಿನದಲ್ಲಿ 50,000 ರೂ. ಗಿಂತ ಹೆಚ್ಚಿನ ನಗದು ವ್ಯವಹಾರಕ್ಕೆ ಪ್ಯಾನ್ ಸಂಖ್ಯೆ ಅಗತ್ಯವಿತ್ತು. ವಾಹನಗಳ ಖರೀದಿ ವಿಷಯದಲ್ಲಿಯೂ ದೊಡ್ಡ ಬದಲಾವಣೆ ತರಲಾಗಿದ್ದು, ದ್ವಿಚಕ್ರ ವಾಹನ ಸೇರಿದಂತೆ ಯಾವುದೇ ಮೋಟಾರು ವಾಹನಗಳ ಬೆಲೆ 5 ಲಕ್ಷ ರೂ. ಮೀರಿದರೆ ಮಾತ್ರ ಪ್ಯಾನ್ ವಿವರ ನೀಡಬೇಕಾಗುತ್ತದೆ.

ಪ್ರಸ್ತುತ ಜಾರಿಯಲ್ಲಿರುವ 1962ರ ನಿಯಮಗಳಲ್ಲಿ ದ್ವಿಚಕ್ರವಾಹನ ಖರೀದಿಗೆ ಪ್ಯಾನ್ ಅವಶ್ಯಕತೆ ಇರಲಿಲ್ಲ. ಆದರೆ ಕಾರುಗಳ ಖರೀದಿಗೆ ಬೆಲೆಯ ಮಿತಿ ಇಲ್ಲದೆ ಪ್ಯಾನ್ ಕಡ್ಡಾಯವಾಗಿತ್ತು. ಅದೇ ರೀತಿ, ಹೋಟೆಲ್ ಅಥವಾ ರೆಸ್ಟೋರೆಂಟ್ ಬಿಲ್‌ಗಳು ರೂ. 1 ಲಕ್ಷ ದಾಟಿದರೆ ಮಾತ್ರ ಪ್ಯಾನ್ ನೀಡಬೇಕು. ಈ ಮೊದಲು ಇದರ ಮಿತಿ ರೂ. 50,000 ಆಗಿತ್ತು.

ಸ್ಥಿರಾಸ್ತಿಗಳ ಖರೀದಿ, ಮಾರಾಟ ಅಥವಾ ಗಿಫ್ಟ್‌ಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ಈಗಿರುವ 10 ಲಕ್ಷ ರೂ.ಮಿತಿಯನ್ನು 20 ಲಕ್ಷ ರೂ. ಗೆ ಹೆಚ್ಚಿಸಲಾಗಿದೆ. ಇನ್ನು ಮುಂದೆ ವಿಮಾ ಕಂಪನಿಗಳೊಂದಿಗೆ ವ್ಯವಹಾರ ಆರಂಭಿಸಲು ಪ್ಯಾನ್ ಕಡ್ಡಾಯವಾಗಲಿದೆ. ಹೊಸ ನಿಯಮಗಳಡಿ ಉದ್ಯೋಗದಾತರು ನೀಡುವ ಉಚಿತ ಊಟದ ಸೌಲಭ್ಯದ ಮಿತಿಯನ್ನು ಪ್ರತಿ ಊಟಕ್ಕೆ 200 ರೂ.ಗೆ ಹೆಚ್ಚಿಸಲಾಗಿದೆ. ಕಾರು ಭತ್ಯೆಯಾಗಿ 1.6 ಲೀಟರ್ ಎಂಜಿನ್ ಸಾಮರ್ಥ್ಯದ ವಾಹನಗಳಿಗೆ ಮಾಸಿಕ 8,000 ರೂ. ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ವಾಹನಗಳಿಗೆ ರೂ. 10,000 ನಿಗದಿಪಡಿಸಲಾಗಿದೆ.

ಸಾರ್ವಜನಿಕರ ಸಲಹೆ ಪಡೆದ ನಂತರ, ಈ ಕರಡು ನಿಯಮಗಳ ಬಗ್ಗೆ ಮಾರ್ಚ್ ಮೊದಲ ವಾರ ಅಧಿಸೂಚನೆ ಹೊರಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.




### ಮನೆ ಬಾಡಿಗೆ ಭತ್ಯೆಗೆ 4 ನಗರಗಳ ಸೇರ್ಪಡೆ

ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ಮೆಟ್ರೋ ನಗರಗಳ ಪಟ್ಟಿಗೆ ಬೆಂಗಳೂರು, ಪುಣೆ, ಅಹಮದಾಬಾದ್ ಮತ್ತು ಹೈದರಾಬಾದ್ ನಗರಗಳನ್ನು ಹೊಸದಾಗಿ ಸೇರಿಸಲಾಗಿದೆ. ಈವರೆಗೆ ಅದರಲ್ಲಿ ದೆಹಲಿ, ಮುಂಬೈ, ಕೋಲ್ಕತ್ತಾ ಮತ್ತು ಚೆನ್ನೈ ಮಾತ್ರ ಇದ್ದವು. ಇನ್ನು ಮುಂದೆ ಕ್ರಿಪ್ಟೋ ಎಕ್ಸ್‌ಚೇಂಜ್‌ಗಳು ತೆರಿಗೆ ಇಲಾಖೆಯೊಂದಿಗೆ ಮಾಹಿತಿ ಹಂಚಿಕೊಳ್ಳುವುದು ಕಡ್ಡಾಯವಾಗಿದೆ. ಅಲ್ಲದೆ, ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿಯನ್ನು (ಸಿಬಿಡಿಸಿ) ಅಧಿಕೃತ ಎಲೆಕ್ಟ್ರಾನಿಕ್ ಪಾವತಿ ವಿಧಾನವಾಗಿ ಸ್ವೀಕರಿಸಲಾಗುವುದು ಎಂದು ಕರಡು ನಿಯಮಗಳಲ್ಲಿ ತಿಳಿಸಲಾಗಿದೆ.

- ಪ್ರಸ್ತುತ ಇರುವ ನಿಯಮಗಳ ಸಂಖ್ಯೆ 511ರಿಂದ 333ಕ್ಕೆ ಇಳಿಕೆ.
- ತೆರಿಗೆ ಫಾರ್ಮ್‌ಗಳ ಸಂಖ್ಯೆಯನ್ನು 399ರಿಂದ 190ಕ್ಕೆ ಇಳಿಕೆ.
- ವಾರ್ಷಿಕ ರೂ. 10 ಲಕ್ಷಕ್ಕಿಂತ ಹೆಚ್ಚಿನ ನಗದು ಠೇವಣಿ, ವಿತ್‌ಡ್ರಾಗೆ ಪ್ಯಾನ್ ಕಡ್ಡಾಯ.
- ಹೋಟೆಲ್ ಬಿಲ್ ರೂ. 1 ಲಕ್ಷ ಗಿಂತ ಕಡಿಮೆ ಪಾವತಿಗೆ ಪ್ಯಾನ್ ಅಗತ್ಯವಿಲ್ಲ.
- ವಾಹನಗಳ ಖರೀದಿಗೆ ರೂ. 5 ಲಕ್ಷ ಮಿತಿ.
- ಸ್ಥಿರಾಸ್ತಿ ಖರೀದಿ ಬೆಲೆ ರೂ. 20 ಲಕ್ಷ ಮೀರಿದರೆ ಪ್ಯಾನ್ ಕಡ್ಡಾಯ.
- ವಿಮಾ ಕಂಪನಿ ಜತೆ ಖಾತೆ ಆಧಾರಿತ ವ್ಯವಹಾರ ಮಾಡಲು ಪ್ಯಾನ್ ಅವಶ್ಯ.
- ಕಚೇರಿ ವಾಹನ, ಉಚಿತ ಊಟದಂತಹ ತೆರಿಗೆ ಮುಕ್ತ ಸೌಲಭ್ಯ ಮಿತಿ ಹೆಚ್ಚಳ.

### ಪ್ಯಾನ್ ಕಾರ್ಡ್ ಕಡ್ಡಾಯ ಬದಲಾವಣೆ ಏನು?

| ವಹಿವಾಟಿನ ವಿಧ | ಹಳೆಯ ಮಿತಿ | ಹೊಸ ಪ್ರಸ್ತಾವಿತ ಮಿತಿ (ಕರಡು 2026) |
|---|---|---|
| ನಗದು ಠೇವಣಿ | ಒಂದು ದಿನದಲ್ಲಿ ರೂ.50,000 | ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ರೂ.10 ಲಕ್ಷ |
| ನಗದು ಹಿಂಪಡೆಯುವಿಕೆ | ಒಂದು ದಿನದಲ್ಲಿ ರೂ.50,000 | ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ರೂ.10 ಲಕ್ಷ |
| ನಾಲ್ಕು ಚಕ್ರದ ವಾಹನಗಳು | ಎಲ್ಲರಿಗೂ ಕಡ್ಡಾಯ (ಬೆಲೆ ಎಷ್ಟೇ ಇದ್ದರೂ) | ಬೆಲೆ ರೂ.5 ಲಕ್ಷ ಮೀರಿದರೆ ಮಾತ್ರ |
| ದ್ವಿಚಕ್ರ ವಾಹನಗಳು | ಕಡ್ಡಾಯವಿರಲಿಲ್ಲ | ಬೆಲೆ ರೂ. 5 ಲಕ್ಷ ಮೀರಿದರೆ ಈಗ ಕಡ್ಡಾಯ |
| ಹೋಟೆಲ್/ರೆಸ್ಟೋರೆಂಟ್ ಬಿಲ್‌ಗಳು | ರೂ.50,000 ಕ್ಕಿಂತ ಹೆಚ್ಚು (ಒಂದೇ ಬಾರಿಯ ಪಾವತಿ) | ಪಾವತಿ ರೂ. 1 ಲಕ್ಷ ಮೀರಿದರೆ ಮಾತ್ರ |
| ಸ್ಥಿರಾಸ್ತಿ | ರೂ.10 ಲಕ್ಷಕ್ಕಿಂತ ಹೆಚ್ಚು ಮೌಲ್ಯ | ರೂ.20 ಲಕ್ಷ ಮೀರಿದರೆ ಮಾತ್ರ |
| ಜೀವ ವಿಮಾ ಕಂತು | ಆರ್ಥಿಕ ವರ್ಷದಲ್ಲಿ ರೂ.50,000 ಕ್ಕಿಂತ ಹೆಚ್ಚು | ಎಲ್ಲಾ ಖಾತೆ ಆಧಾರಿತ ವ್ಯವಹಾರಕ್ಕೆ ಕಡ್ಡಾಯ |

# ನಾರಾಯಣಗುರು ಬ್ಯಾಂಕಿನ ವತಿಯಿಂದ BIPCON–2026



ನಾರಾಯಣಗುರು ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಉಡುಪಿ ವತಿಯಿಂದ BIPCON-2026 (Businessmen, Industrialist & Professionals conference) ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಮತ್ತು ವೃತ್ತಿಪರರ ಸಮ್ಮಿಲನ ಕಾರ್ಯಕ್ರಮವು ಉಡುಪಿಯ ಪ್ರಖ್ಯಾತ ಹೊಟೇಲ್ ಓಷಿಯನ್ ಪರ್ಲ್‌ನಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಹರಿಶ್ಚಂದ್ರ ಅಮೀನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.


ಸಮ್ಮಿಲನವನ್ನು ಹೆಸರಾಂತ ಉದ್ಯಮಿ ಹಾಗೂ ಬಿಲ್ಲವ ಚೇಂಬರ್ ಆಫ್ ಕಾಮರ್ಸ್ ಮುಂಬಯಿ ಇದರ ಅಧ್ಯಕ್ಷರಾದ ಎನ್.ಟಿ. ಪೂಜಾರಿ ಉದ್ಘಾಟಿಸಿ ಇಂತಹ ಸಮ್ಮಿಲನ ಕಾರ್ಯಕ್ರಮಗಳು ಒಬ್ಬರನ್ನೊಬ್ಬರು ಅರಿತು ಕೊಳ್ಳಲು ಸಹಕಾರಿ ಆಗುವುದರೊಂದಿಗೆ ಬ್ಯಾಂಕಿನ ಅಭಿವೃದ್ಧಿಗೆ ಪ್ರೇರಕವಾಗುವುದು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬ್ಯಾಂಕಿನ ಮಾರ್ಗದರ್ಶಕರು ಹಾಗೂ ಪ್ರಕಾಶ್ ರಿಟೇಲ್ಸ್ ಪ್ರೈವೇಟ್ ಲಿಮಿಟೆಡ್ ಇದರ ಮ್ಯಾನೇಜಿಂಗ್ ಡೈರೆಕ್ಟರ್ ಸೂರ್ಯಪ್ರಕಾಶ್ ಅವರು ಮಾತನಾಡಿ ಯಾವುದೇ ಕ್ಷೇತ್ರದಲ್ಲಿ ಸಮಾಜ ಬೆಳೆಯ ಬೇಕಾದರೆ ಬ್ಯಾಂಕಿನ ಕೊಡುಗೆ ಮಹತ್ತರವಾದುದು. ಹಿರಿಯರು ಕಟ್ಟಿ ಬೆಳೆಸಿದ ಈ ಬ್ಯಾಂಕಿನಲ್ಲಿ ಹೂಡಿಕೆ ಮಾಡುವುದರ ಮೂಲಕ ಬ್ಯಾಂಕನ್ನು ಸದೃಢಗೊಳಿಸುವ ಜವಾಬ್ದಾರಿ ನಮ್ಮೆಲ್ಲರದು ಎಂದರು. ಇನ್ನೋರ್ವ ಅತಿಥಿ ಕರ್ನಾಟಕ ಸಂಘ ಸರ್ಜಾದ ಅಧ್ಯಕ್ಷ ಸತೀಶ್ ಪೂಜಾರಿಯವರು ಮಾತನಾಡಿ ಇಂತಹ ಸಮ್ಮಿಲನ ಕಾರ್ಯಕ್ರಮಗಳು ಸಮಾಜವನ್ನು ಒಂದುಗೂಡಿಸಿ ಉದ್ಯಮ ಬೆಳೆಯುದರೊಂದಿಗೆ ಸಮಾಜಕೂಡಾ ಬೆಳೆಯಲು ಸಹಕಾರಿ ಆಗುತ್ತದೆ ಎಂದು ಶುಭ ಹಾರೈಸಿದರು.

ವೇದಿಕೆಯಲ್ಲಿ ದುಬಾಯಿ ಬಿಲ್ಲವಾಸ್ ಇದರ ಸಲಹೆಗಾರರಾದ ಪ್ರಕಾಶ್ ಪೂಜಾರಿ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ರೋಶನ್ ಫಾಸ್ಟಿನ್ ಆಳ್ವ ಉಪಸ್ಥಿತರಿದ್ದರು. ಬ್ಯಾಂಕಿನ ಅಧ್ಯಕ್ಷ ಹರಿಶ್ಚಂದ್ರ ಅಮೀನ್ ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲರನ್ನು ಸ್ವಾಗತಿಸಿದರು. ಉಪಾಧ್ಯಕ್ಷೆ ವಿಜಯ ಜಿ ಬಂಗೇರ ಧನ್ಯವಾದವಿತ್ತರು. ರೋಟರಿ ನಿಯೋಜಿತ ಸಹಾಯಕ ಗವರ್ನರ್ ಹೇಮಂತ್ ಯು. ಕಾಂತ್ ಕಾರ್ಯಕ್ರಮ ಸಂಯೋಜನೆಯ ಮೂಲಕ ಪ್ರತಿನಿಧಿಗಳನ್ನು ಸಭೆಗೆ ಪರಿಚಯಿಸಿ ಯಾವ ರೀತಿಯಲ್ಲಿ ನಾವು ಬ್ಯಾಂಕಿನ ಪ್ರಗತಿಯಲ್ಲಿ ಕೈ ಜೋಡಿಸಬಹುದು ಎಂದು ಡೆಮೋ ನಡೆಸುವ ಮೂಲಕ ವಿವರಿಸಿದರು. ತದನಂತರ ಬ್ಯಾಂಕಿನ ಬೆಳವಣಿಗೆಯ ಬಗ್ಗೆ ಕಿರುಚಿತ್ರ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಸುಮಾರು ಆಯ್ದ 75 ಪ್ರತಿನಿಧಿಗಳು ಭಾಗವಹಿಸಿದ್ದರು.

---




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▶▶ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**ಪ್ರಶ್ನೆ: 01. ನಮ್ಮ ಬ್ಯಾಂಕಿನ ಚುನಾವಣೆ 28/01/2024 ರಲ್ಲಿ ಜರುಗಿದೆ ನಂತರ**

1. **ಬ್ಯಾಂಕಿನ ಮಹಿಳಾ ನಿರ್ದೇಶಕರು ದಿನಾಂಕ : 14/04/2024 ರಂದು ರಾಜೀನಾಮೆ ನೀಡಿದರು.**
2. **ಸಾಮಾನ್ಯ ಸ್ಥಾನದ ನಿರ್ದೇಶಕರು ದಿನಾಂಕ : 30/06/2024 ರಂದು ದೈವಾದೀನರಾಗಿದ್ದಾರೆ.**

**ಈ ಕುರಿತು ಚುನಾವಣೆ ನಡೆಸಲು ಪತ್ರ ಬರೆಯಲಾಗಿ ಯಾವುದೆ ಸ್ಪಷ್ಟ ಉತ್ತರ ಬರದೇ ಜೂನ್ 2025 ರಂದು ಎರಡು ಸ್ಥಾನಕ್ಕೆ ಚುನಾವಣೆ ನಡೆಸುವ ಕುರಿತು ಇಲಾಖೆ ಇಂದ ಪತ್ರ ಬಂದಿರುತ್ತದೆ ಅಲ್ಲದೆ 13.ಡಿ. ಸೇರಿ ಎಲ್ಲಾ ದಾಖಲಾತಿ ಸಲ್ಲಿಸಲು ಕೋರಿರುವ ಹಿನ್ನೆಲೆಯಲ್ಲಿ ನಾವು ನವೆಂಬರ್‌ನಲ್ಲಿ 13.ಡಿ. ಸೇರಿ ಎಲ್ಲಾ ದಾಖಲಾತಿಯನ್ನು ಚುನಾವಣಾಧಿಕಾರಿ ಅಲಿ ಆಸ್ಕರ್ ರಸ್ತೆಗೆ ಸಲ್ಲಿಸಿದಾಗ ಅವರು ಕಾರ್ಯವ್ಯಾಪ್ತಿ ಚುನಾವಣಾ ಆಯೋಗಕ್ಕೆ ಇದೆ ಅಲ್ಲಿ ದಾಖಲೆ ಸಲ್ಲಿಸಲು ಸೂಚಿಸಿದರು. ಅದರಂತೆ ನಾವು 04/12/2025 ರಂದು ದಾಖಲಾತಿ ಸಲ್ಲಿಸಿದೆವು. ಅವರು ಸಕಾರಾತ್ಮಕವಾಗಿ ಸ್ಪಂದಿಸಿ ಚುನಾವಣೆಗೆ ರಿಟರ್ನಿಂಗ್ ಅಧಿಕಾರಿಯವರನ್ನು ನೇಮಿಸಿ, ಅಂತಿಮ ಮತದಾರರ ಪಟ್ಟಿಯನ್ನು ನೀಡಿರುತ್ತಾರೆ. ರಿಟರ್ನಿಂಗ್ ಅಧಿಕಾರಿಯವರು ಕ್ಯಾಲೆಂಡರ್ ಆಫ್ ಇವೆಂಟ್ ಅನ್ನು ಇಂದು ನೀಡುವುದಾಗಿ ಹೇಳಿದ್ದಾರೆ. ಆದರೆ ಇಂದು ಆಡಳಿತ ಮಂಡಳಿ ಸಭೆಯು ಜರುಗಲಿದ್ದು ಚುನಾವಣೆ ನಡೆಯುವ ಬದಲು ಕಾಯ್ದೆ ತಿದ್ದುಪಡಿಯಾಗಿರುವುದರಿಂದ ಒಂದು ಪಂಗಡ ನಾಮ ನಿರ್ದೇಶನ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಹಂತದಲ್ಲಿ ಚುನಾವಣೆ ಪ್ರಕ್ರಿಯೆ ನಿಲ್ಲಿಸಿ ಕಾಯ್ದೆ ತಿದ್ದುಪಡಿ ಮುನ್ನ ತೆರವಾದ ನಿರ್ದೇಶಕ ಸ್ಥಾನಕ್ಕೆ ನಾಮ ನಿರ್ದೇಶನವನ್ನು ಬಹುಮತದ ಆಧಾರದ ಮೇಲೆ ನೇಮಿಸಬಹುದೇ ಎಂದು ಸಲಹೆ ನೀಡಲು ಕೋರಿದೆ. ಇದು ಅತೀ ತುರ್ತಾಗಿದೆ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

ಉತ್ತರ: ಆಕಸ್ಮಿಕ ರಿಕ್ತತೆಯ ಸ್ಥಾನಗಳನ್ನು ನಾಮನಿರ್ದೇಶನ ಮಾಡುವ ಮೂಲಕ ಮಂಡಳಿಯು ಭರ್ತಿ ಮಾಡಬಹುದು. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 29ಇ ಗೆ ದಿನಾಂಕ:10.10.2021ರಂದು ಆದ ತಿದ್ದುಪಡಿಯಂತೆ ಉಳಿದಿರುವ ಪದಾವಧಿಯು ಮಂಡಳಿಯ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ ನಾಮ ನಿರ್ದೇಶನಗೊಂಡ ನಿರ್ದೇಶಕರು ಚುನಾವಣೆ ನಡೆದು ಹೊಸ ನಿರ್ದೇಶಕರು ಚುನಾಯಿತರಾಗುವವರೆಗೆ ಅಧಿಕಾರದಲ್ಲಿರುತ್ತಾರೆ.

ಮೇಲಿನ ಕಾಯ್ದೆಯ ಕಲಂಗೆ ದಿನಾಂಕ: 12.09.2025ರಂದು ನಡೆದ ತಿದ್ದುಪಡಿಯಂತೆ ಮಂಡಳಿಯ ಉಳಿದಿರುವ ಪದಾವಧಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ಆಕಸ್ಮಿಕ ರಿಕ್ತತೆಯ ಸ್ಥಾನಗಳನ್ನು ನಾಮನಿರ್ದೇಶನ ಮಾಡುವ ಮೂಲಕ ಮಂಡಳಿಯು ಭರ್ತಿ ಮಾಡಬಹುದು. ಆದರೆ, ಈ ಬಗ್ಗೆ ಹೊಸ ನಿಯಮಗಳು ಜಾರಿಯಾಗುವವರೆಗೆ ಕಾಯ್ದೆಯ ಹೊಸ ತಿದ್ದುಪಡಿಗಳು ಕಾರ್ಯರೂಪಕ್ಕೆ ಬರುವುದಿಲ್ಲವೆಂದು ಇಲಾಖೆ ಮತ್ತು ಚುನಾವಣಾ ಪ್ರಾಧಿಕಾರಗಳ ಅಭಿಪ್ರಾಯವಾಗಿದೆ. ಇದಲ್ಲದೆ ನಿಯಮ 14 ಎಎಫ್ ಗೆ ತಿದ್ದುಪಡಿಯಾಗಬೇಕಿದೆ. ಆದ್ದರಿಂದ, ಸಹಕಾರ ಚುನಾವಣಾಧಿಕಾರಿಗಳ ಸೂಚನೆಗಳನ್ನು ಪಾಲಿಸಿ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಾಂಗ್ಲಾದೇಶದಲ್ಲಿ ನಡೆದ ಚುನಾವಣೆಯಲ್ಲಿ ಬಹುಮತ ಪಡೆಯುವ ಮೂಲಕ ಬಾಂಗ್ಲಾ ರಾಷ್ಟ್ರೀಯ ಪಕ್ಷ ಅಭೂತ ಪೂರ್ವ ಗೆಲುವು ಸಾಧಿಸಿದ್ದು, ಪಕ್ಷದ ನಾಯಕರಾದ ತಾರಿಕ್ ರೆಹಮಾನ್ ದೇಶದ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.
- ಈ ಬಾರಿಯ ಬೇಸಿಗೆಯಲ್ಲಿ ಕಪ್ಪತಗುಡ್ಡ ವನ್ಯ ಜೀವಿಧಾಮಕ್ಕೆ ಬೆಂಕಿ ತಗುಲದಂತೆ ಈ ಭಾಗದ ನೂರಾರು ಕುರಿಗಾರರ ಒಳಗೊಂಡ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದೂ, ಯಾವುದೇ ಬೆಂಕಿಯ ಆಕಸ್ಮಿಕ ಘಟನೆಗಳು ನಡೆಸದಂತೆ ಜಾಗೃತಿ ಮೂಡಿಸಲಾಗುತ್ತಿದೆ.
- ಭಾರತ ಮೂಲದ ಪದವಿ ವಿದ್ಯಾರ್ಥಿನಿ ಜಾಹ್ನವಿ ಕಂದುಲಾ ಅವರು ಅಮೇರಿಕಾದ ಸಿಯಾಟೆಲ್ ನಗರದಲ್ಲಿನ ರಸ್ತೆಯೊಂದನ್ನ ದಾಟುತ್ತಿದ್ದಾಗ ವೇಗವಾಗಿ ಬರುತ್ತಿದ್ದ ಪೊಲೀಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ 2023ರಲ್ಲಿ ಮೃತಪಟ್ಟಿದ್ದರು. ಇದೀಗ, ಅವರ ಕುಟುಂಬಕ್ಕೆ ಸಿಯಾಟೆಲ್ ಸ್ಥಳೀಯಾಡಳಿತ 29 ಮಿಲಿಯನ್ ಡಾಲರ್ (ಸುಮಾರು ರೂ. 262 ಕೋಟಿ) ಪರಿಹಾರ ಘೋಷಿಸಿದೆ ಎಂದು ವರದಿಯಾಗಿದೆ.
- ಮಸ್ಕ್ ಒಡೆತನದಲ್ಲಿರುವ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ಸ್ಪೇಸ್ ಎಕ್ಸ್', ಕೃತಕ ಬುದ್ಧಿಮತ್ತೆ 'ಎಕ್ಸ್ ಎಐ' ವಿಲೀನ ಪ್ರಕ್ರಿಯೆ ಬಳಿಕ ಅವರ ಸಂಪತ್ತಿನಲ್ಲಿ ಭಾರಿ ಏರಿಕೆ ಕಂಡುಬಂದಿದೆ. 2027ರ ಹೊತ್ತಿಗೆ ವಿಶ್ವದ ಮೊದಲ ಟ್ರಿಲಿಯನೇರ್ ಅಂದರೆ, ಲಕ್ಷ ಕೋಟಿ ಡಾಲರ್ ಒಡೆಯ – ಅಂದಾಜು ರೂ. 83.95 ಲಕ್ಷ ಕೋಟಿ ಸಂಪತ್ತಿನ ಮಾಲೀಕ ಎನಿಸಿಕೊಳ್ಳಲಿದ್ದಾರೆ. ಮಸ್ಕ್ ನಿವ್ವಳ ಆಸ್ತಿ ಮೌಲ್ಯವು ಜಗತ್ತಿನ 170 ರಾಷ್ಟ್ರಗಳ ವಾರ್ಷಿಕ ಜಿಡಿಪಿಗಿಂತಲೂ ಅಧಿಕವಿದೆ.
- ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕ್ಯಾನ್ಸರ್ ಪೀಡಿತರಿಗೆ ರೊಬೊಟಿಕ್ ತಂತ್ರಜ್ಞಾನ ವರದಾನವಾಗಿದ್ದು, ರಾಜ್ಯದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಕಿದ್ವಾಯಿ ಸಂಸ್ಥೆಯಲ್ಲಿ ಮಾತ್ರ ಈ ರೊಬೊಟ್ ಯಂತ್ರ ಕಾರ್ಯಾಚರಣೆ ಮಾಡುತ್ತಿದ್ದು, ಈವರೆಗೆ ಒಟ್ಟು 1,069 ರೊಬೊಟಿಕ್ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಪ್ರಾಸ್ಟೇಟ್ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್, ಎದೆಗೂಡಿನ ಕ್ಯಾನ್ಸರ್ ಮುಂತಾದವುಗಳಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

## ಓದುಗರ ಅನಿಸಿಕೆ...




**ಸುರಕ್ಷತಾ ಕ್ರಮ ಅಗತ್ಯ :** ಕಳೆದ ಹತ್ತು ವರ್ಷಗಳಿಂದ ಗ್ರಾಹಕರು ಹಿಂದಕ್ಕೆ ಪಡೆಯದ ಠೇವಣಿ ಮೊತ್ತ ರೂ.85 ಸಾವಿರ ಕೋಟಿ ನಿಧಿಯಿಂದ ಬ್ಯಾಂಕುಗಳಲ್ಲಿ ಡಿಜಿಟಲ್ ವಂಚನೆಗೆ ಒಳಗಾದ ಗ್ರಾಹಕರಿಗೆ ಒಂದು ಬಾರಿ ಪರಿಹಾರವಾಗಿ ರೂ.25 ಸಾವಿರ ಪಾವತಿಸುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ. ಮುಖ್ಯವಾಗಿ ಗ್ರಾಹಕರಿಗೆ ವಂಚನೆಯಾಗದಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಆರ್‌ಬಿಐ ಅಳವಡಿಸಿಕೊಳ್ಳಬೇಕಿದೆ.

**▸▸ ಚಂದ್ರಕಾಂತ ಪಿ.ಕೆ., ತುಮಕೂರು**

**ಸೂಕ್ತ ಕ್ರಮ ಕೈಗೊಳ್ಳಬೇಕಿದೆ :** ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ಪೂರಕ ಭದ್ರತೆ ಇಲ್ಲದೆ ನೀಡುವ ಸಾಲದ ಮಿತಿಯನ್ನು ರಿಸರ್ವ್ ಬ್ಯಾಂಕ್ 10 ಲಕ್ಷ ರೂಪಾಯಿಯಿಂದ 20 ಲಕ್ಷ ರೂಪಾಯಿಗೆ ಹೆಚ್ಚಿಸಿದೆ. ಆದರೆ, ಬ್ಯಾಂಕುಗಳು ಈ ಮಿತಿಯಲ್ಲಿ ಸಾಲ ಕೊಡಲು ಸತಾಯಿಸುತ್ತವೆ ಹಾಗೂ ಪೂರಕ ಭದ್ರತೆ ನೀಡುವಂತೆ ಒತ್ತಾಯಿಸುತ್ತವೆ. ಅರ್ಹರಿಗೆ ಸಕಾಲದಲ್ಲಿ ಸಾಲ ದೊರೆಯುವಂತೆ ರಿಸರ್ವ್ ಬ್ಯಾಂಕ್ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

**▸▸ ಎನ್. ರಂಗಸ್ವಾಮಿ, ಚಿತ್ರದುರ್ಗ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.